# ಗದ್ದಲದ ನಡುವೆ ಪ್ರಮಾಣ ಸ್ವೀಕಾರ



**ನವದೆಹಲಿ:** ಪ್ರತಿಪಕ್ಷಗಳ ಗದ್ದಲ, ಆಕ್ರೋಶಗಳ ನಡುವೆಯೇ ರಾಜ್ಯಸಭೆಗೆ ನಾಮನಿರ್ದೇಶನಗೊಂಡ ಸುಪ್ರೀಂಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯ್ ಗುರುವಾರ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಇದೇ ಮೊದಲ ಬಾರಿಗೆ ಸದಸ್ಯರೊಬ್ಬರು ಪ್ರಮಾಣ ಸ್ವೀಕರಿಸುವ ಸಂದರ್ಭದಲ್ಲಿ ಘೋಷಣೆ ಕೂಗಿದ ಹಾಗೂ ಪ್ರತಿಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದ ಘಟನೆ ನಡೆದಿದೆ.

ಗೊಗೊಯ್ ಅವರು ಇಂಗ್ಲಿಷ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸುತ್ತಿದ್ದಂತೆ, ಕಾಂಗ್ರೆಸ್ ಮತ್ತು ಎಡಪಕ್ಷಗಳ ಸಂಸದರು 'ಶೇಮ್ ಆನ್ ಯು', 'ಡೀಲ್' ಎಂದು ಘೋಷಣೆ ಕೂಗಿದರು. ಈ ವೇಳೆ ಸಭಾಪತಿ ಎಂ.ವೆಂಕಯ್ಯ ನಾಯ್ಡು ಈ

ಅಂತಗಳು ಕಡತಕ್ಕೆ ಸೇರ್ಪಡೆಯಾಗುವಂತಿಲ್ಲ ಎಂದರು. ಜತೆಗೆ ಘೋಷಣೆ ಕೂಗಿದ ಬಗ್ಗೆ ಆಕ್ಷೇಪ ಮಾಡಿದ ಸಭಾಪತಿ 'ಅಭಿಪ್ರಾಯಗಳನ್ನು ಹೊರಗಡೆ ವ್ಯಕ್ತಪಡಿಸಲು ಅವಕಾಶ ಉಂಟು. ಮೇಲ್ಮನೆಯ ಸದಸ್ಯರಿಗೆ ಇದು ಹೇಳಿದ ವರ್ತನೆಯಲ್ಲ' ಎಂದರು. ಪ್ರಮಾಣ ಸ್ವೀಕಾರದ ಬಳಿಕ ನ್ಯಾ. ಗೊಗೊಯ್ ಸಭಾಪತಿ ಪೀಠದ ಬಳಿಗೆ ತೆರಳಿ, ನಾಯ್ಡು ಅವರಿಂದ ಅಭಿನಂದನೆ ಸ್ವೀಕರಿಸಿದರು.

ಸರ್ಕಾರದ ವತಿಯಿಂದ ಕೇಂದ್ರ ಕಾನೂನು ಸಚಿವ ರವಿಶಂಕರ ಪ್ರಸಾದ್ ನ್ಯಾ. ಗೊಗೊಯ್‌ರನ್ನು ಅಭಿನಂದಿಸಿದರು. ಬಳಿಕ ಮಾತನಾಡಿದ ರಾಜ್ಯಸಭಾ ಸದಸ್ಯ ನ್ಯಾ. ಗೊಗೊಯ್, 'ಈಗ ನನ್ನ ವಿರುದ್ಧ ಘೋಷಣೆ ಕೂಗಿದವರು, ಮುಂದಿನ ದಿನಗಳಲ್ಲಿ ನನ್ನನ್ನು ಸ್ವೀಕರಿಸಲಿದ್ದಾರೆ' ಎಂದು ಹೇಳಿದರು.